**ಭಗವನ್ ಮಹಾವೀರರ ಸ್ಮರಣಾರ್ಥ ಪ್ರಶಸ್ತಿ ಸ್ಥಾಪನೆ**

1703 (2088) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಜೈನ್ ಸಮುದಾಯದವರು ಭಗವಾನ್ ಮಹಾವೀರರ ನಾಮಾಂಕಿತದಲ್ಲಿ ವಾರ್ಷಿಕ ಪ್ರಶಸ್ತಿ ನೀಡಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೆ?

ಆ) ಸಲ್ಲಿಸಿದ್ದರೆ, ಸರ್ಕಾರ ಈ ಬಗೆಗೆ ಕೈಗೊಂಡ ಕ್ರಮವೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವರು):

ಅ) ಹೌದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

**ಸೇಡಂ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯಿತಿಯಿಂದ ರಸ್ತೆಗಳ ದುರಸ್ತಿಗಾಗಿ ಹಣವನ್ನು ನಿಗದಿಪಡಿಸುವುದು**

1705 (2009) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿರುವ ರಸ್ತೆಗಳು ಯಾವುವು;

2) ಗುಲ್ಬರ್ಗಾ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರಸ್ತೆಗಳ ದುರಸ್ತಿಗಾಗಿ ಹಣ ನಿಗದಿಪಡಿಸದೇ ಈ ರಸ್ತೆಗಳು ದೊಡ್ಡ ದೊಡ್ಡ ಕೊರಕಲುಗಳು ಬಿದ್ದು ಬಸ್ಸುಗಳ, ವಾಹನಗಳ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಜಿಲ್ಲಾ ಪಂಚಾಯತಿ ಯೋಜನೆಯ ಕ್ರಿಯಾ ಯೋಜನೆಯಲ್ಲಿ ಜಿಲ್ಲಾ ಪಂಚಾಯತಿ ರಸ್ತೆಗಳ ದುರಸ್ತಿಗಾಗಿ ಪ್ರತಿಶತ ಹಣವನ್ನು ನಿಗದಿಪಡಿಸಿ ಬಸ್ಸುಗಳ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ (1) ತಾಲ್ಲೂಕು ಅಭಿವೃದ್ಧಿ ಮಂಡಳಿ ರಸ್ತೆಗಳು (2) ಗ್ರಾಮಾಂತರ ರಸ್ತೆಗಳು ಮತ್ತು (3) ಇತರೆ ರಸ್ತೆಗಳು ಬರುತ್ತವೆ.

2) ರೂ. 333.35 ಲಕ್ಷಗಳನ್ನು ಪ್ರಸಕ್ತ ಸಾಲಿನಲ್ಲಿ ರಸ್ತೆಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ನಿಗಧಿಪಡಿಸಲಾಗಿದೆ. ಆದ್ಯತೆ ಮೇರೆಗೆ ದುರಸ್ತಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

3) ರಸ್ತೆಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ಕೆಳಕಂಡಂತೆ ಹಣವನ್ನು ಒದಗಿಸಬೇಕಾಗಿರುತ್ತದೆ.

| | | |
|---|---|---|
| 1 | ಡಾಂಬರೀಕರಣ ರಸ್ತೆಗೆ | ರೂ. 19200 ಪ್ರತಿ ಕಿಮೀಗೆ |
| 2 | ಖಡೀಕರಣ ರಸ್ತೆಗೆ | ರೂ. 13800 ಪ್ರತಿ ಕಿಮೀಗೆ |
| 3 | ಮಣ್ಣು ರಸ್ತೆಗೆ | ರೂ. 9600 ಪ್ರತಿ ಕಿಮೀಗೆ |
| 4 | ಸೇತುವೆಗಳು | ರೂ. 2200 ಪ್ರತಿಯೊಂದಕ್ಕೆ |